2) ಸರ್ಕಾರಿ ಔಷಧ ಮಳಿಗೆಯಿಂದ ಸರಬರಾಜು ರೂ. 21,61,538-00

ಉಪಕರಣಗಳು

1) ಸಾಮಾನ್ಯ ಉಪಕರಣ ರೂ. 2,17,460-00

2) ಅತ್ಯಾಧುನಿಕ ಉಪಕರಣ ರೂ. 30,00,000-00

ಆ) ಕ್ಷ ಕಿರಣ ಫಿಲಂಸ್‌ನ ರೂಪದಲ್ಲಿ ರೂ. 1,97,701-17

ಇ) ಇಲ್ಲಾ.

ಈ) ಅನ್ವಯಿಸುವುದಿಲ್ಲ.

ಕಿಡ್ನಿ ಹಗರಣಕ್ಕೆ ಸಂಬಂಧಿಸಿದಂತೆ ತಜ್ಞ ವೈದ್ಯರ ಸಮಿತಿಯ ವರದಿ

172 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಇತ್ತೀಚೆಗೆ ಬೆಂಗಳೂರಿನಲ್ಲಿ ಪತ್ತೆಯಾದ ಕಿಡ್ನಿ ಹಗರಣದ ಬಗ್ಗೆ ಸರ್ಕಾರ ತಜ್ಞ ವೈದ್ಯರ ಸಮಿತಿಯನ್ನು ರಚಿಸಿದೆಯೇ?

ಆ) ಹಾಗಿದ್ದಲ್ಲಿ ಈ ಸಮಿತಿಯ ಸದಸ್ಯರ ಹೆಸರುಗಳ ವಿವರ ನೀಡುವುದು

ಇ) ಈ ಸಮಿತಿಯು ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ?

ಈ) ಇಲ್ಲದಿದ್ದಲ್ಲಿ, ಯಾವಾಗ ಈ ಸಮಿತಿ ತನ್ನ ವರದಿಯನ್ನು ನೀಡಲಾಗುವುದು?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಆ) ಇಲ್ಲಾ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

1996ನೇ ರಾಷ್ಟ್ರೀಯ ಕ್ರೀಡೆಗಾಗಿ ನಿರ್ಮಿಸುತ್ತಿರುವ ಕ್ರೀಡಾಂಗಣಗಳು

168 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) 1996ನೇ ರಾಷ್ಟ್ರೀಯ ಕ್ರೀಡೆಗಾಗಿ ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಹೊಸದಾಗಿ ನಿರ್ಮಿಸಲಿರುವ ಕ್ರೀಡಾಂಗಣಗಳು ಎಷ್ಟು (ಪೂರ್ಣ ವಿವರನೀಡುವುದು)

ಆ) ಇವುಗಳಿಗೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಇವುಗಳಿಗೆ ಕೇಂದ್ರ ಸರ್ಕಾರದಿಂದ ಬರತಕ್ಕ ಹಣವೆಷ್ಟು?

ಈ) ರಾಷ್ಟ್ರೀಯ ಕ್ರೀಡೆಗಾಗಿ ಯಾರ ಕ್ರೀಡಾಂಗಣಗಳನ್ನು ಈ ಜಲಕೊಲಗಳನ್ನಾಗಿ ನವೀಕರಿಸಲಾಗುವುದು ಅಥವಾ ಮೇಲ್ದರ್ಜೆಗೆ ಏರಿಸಲಾಗುವುದು?

ಉ) ಇದಕ್ಕಾಗಿ ತಗಲುವ ವೆಚ್ಚವೆಷ್ಟು?

ಊ) ಹೊಸ ಕ್ರೀಡಾಂಗಣ ಹಾಗೂ ನವೀಕರಿಸುವ ಕಾಮಗಾರಿಗಳನ್ನು ಗುತ್ತಿಗೆಗೆ ನೀಡಲಾಗಿದೆಯೆ?

ಋ) ಹಾಗಿದ್ದಲ್ಲಿ ಯಾರಿಗೆ ಗುತ್ತಿಗೆಗೆ ನೀಡಲಾಗಿದೆ?

ಋೂ) ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುವ ಬಗ್ಗೆ ವಿವರ ನೀಡುವುದು.

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) 1996ರಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ನೂತನವಾಗಿ ನಿರ್ಮಿಸಿರುವ ಕ್ರೀಡಾಂಗಣಗಳು ಒಟ್ಟು 3(ಮೂರು) ಕ್ರೀಡಾಂಗಣಗಳ ವಿವರ ಈ ಕೆಳಕಂಡಂತಿದೆ.

1. ಶ್ರೀ ಕಂಠೀರವ ಕ್ರೀಡಾಂಗಣ ಆವರಣದಲ್ಲಿ 4,000 ಪ್ರೇಕ್ಷಕರ ಆಸನವುಳ್ಳ ಒಂದು ಒಳಾಂಗಣ ಕ್ರೀಡಾಂಗಣ,

2. ಬೆಂಗಳೂರಿನ ಕೋರಮಂಗಲದಲ್ಲಿ 2000 ಪ್ರೇಕ್ಷಕರ ಆಸನವುಳ್ಳ ಒಂದು ಒಳಾಂಗಣ ಕ್ರೀಡಾಂಗಣ

3. ಮೈಸೂರಿನ ಶ್ರೀ ಚಾಮುಂಡಿ ವಿಹಾರ ಕ್ರೀಡಾ ಸಂಕೀರ್ಣದಲ್ಲಿ 3000 ಪ್ರೇಕ್ಷಕರ ಆಸನವುಳ್ಳ ಒಂದು ಒಳಾಂಗಣ ಕ್ರೀಡಾಂಗಣ

ಈ ಕ್ರೀಡಾಂಗಣಗಳಿಗೆ ತಗಲುವ ಅಂದಾಜು ವೆಚ್ಚ ಈ ರೀತಿ ಇರುತ್ತದೆ.

1. 4000 ಪ್ರೇಕ್ಷಕರ ಒಳಾಂಗಣ ಕ್ರೀಡಾಂಗಣ ವೆಚ್ಚ ರೂ. 13,99,80,000-00

2. ಕೋರಮಂಗಲದಲ್ಲಿರುವ 2000 ಪ್ರೇಕ್ಷಕರ ಒಳಾಂಗಣ ನಿರ್ಮಾಣದ ವೆಚ್ಚ ರೂ. 6,61,34,680-00

3. ಮೈಸೂರಿನ ಚಾಮುಂಡಿ ವಿಹಾರ ಸಂಕೀರ್ಣದಲ್ಲಿ 3000 ಪ್ರೇಕ್ಷಕರ . ಒಳಾಂಗಣ ಕ್ರೀಡಾಂಗಣ ನಿರ್ಮಾಣದ ವೆಚ್ಚ ರೂ. 6,10,00,000-00

ಕೇಂದ್ರ ಸರ್ಕಾರದಿಂದ ಬರುಬಹುದಾದಂತಹ ಒಟ್ಟು ಧನ ಸಹಾಯದ ಅಂದಾಜು ರೂ. 10.00 ಕೋಟಿಗಳು.

ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಉದ್ಭವಿಸುವುದಿಲ್ಲ

ಹೌದು

1.	ಕೋರಮಂಗಲದಲ್ಲಿನ 2000 ಪ್ರೇಕ್ಷಕರ ಒಳಾಂಗಣ ಕ್ರೀಡಾಂಗಣ	ಮೆ.ಭಂಡಾರಿ ಬಿಲ್ಡರ್ಸ್ ಪ್ರೈ.ಲಿಮಿಟೆಡ್, ಬೆಂಗಳೂರು
2.	ಶ್ರೀಗ ಕಂಠೀರವ ಕ್ರೀಡಾಂಗಣ ಆವರಣದಲ್ಲಿ 4000 ಪ್ರೇಕ್ಷಕರ ಒಳಾಂಗಣ ಕ್ರೀಡಾಂಗಣ	ಮೆ.ಎಲ್ ಅಂಡ್ ಟಿ. ಮದ್ರಾಸ್
3.	ಶ್ರೀ ಚಾಮುಂಡಿ ವಿಹಾರ ಕ್ರೀಡಾಸಂಕೀರ್ಣದಲ್ಲಿ 3000 ಪ್ರೇಕ್ಷಕರ ಒಳಾಂಗಣ ಕ್ರೀಡಾಂಗಣ	ಮೆ. ಹಿಂದೂಸ್ತಾನ್ ಸ್ಟೀ ಕನಸ್ಟ್ರಕ್ಷನ್ ಲಿ ಬೆಂಗಳೂರು

ಈ ಎಲ್ಲಾ ಕಾಮಗಾರಿಗಳನ್ನು 1995ರ ನವೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.